ಯಾವುದೋ ಬಸ್ಸು ಹತ್ತಿ ಕೂತವ್ಳು ಸಿಕ್ಕಿಕೊಂಡದ್ದು ಅಪ್ಪಾಜಿಯ ಪೇಶಂಟೊಬ್ಬರ ಕೈಗೆ. ಅವರು ಸೀದಾ ಮನೆ ತಲುಪಿಸಿದ್ರು. ಅಪ್ಪಾಜಿಯನ್ನು ತಬ್ಬಿ ಗಟ್ಟಿಯಾಗಿ ಅತ್ಗಂಡು ನಡೆದ ಸಂಗತಿನೆಲ್ಲಾ ಹೇಳ್ದೆ. ಇನ್ನೆಂದು ಶಾಲೆಗೆ ಹೋಗಲ್ಲ ಅಂತ ಹಟ ಹಿಡ್ದೆ. ನಂಗೆ ಸಮಧಾನ ಆಗೋವರ್ಗು ಮೌನವಾಗಿತ್ತು ಅಪ್ಪಾಜಿ. ಆಮೇಲೆ ಒಂದು ರಾಶಿ ಪುಸ್ತಕನ ಕೊಂಡ್ಕಂಡ್ ಬಂತು. ಮನೆಗೆ ಬಂದು ಇಂಗ್ಲಿಷ್ ಕಲಿಸಕೆ ಮೇಷ್ಟರನ್ನ ಗೊತ್ತು ಮಾಡ್ತು. ನನ್ನ ಕೂರಿಸ್ಕಂಡು ‘ಸಮಸ್ಯೆಯಿಂದ ದೂರ ಓಡದ್ರಿಂದ ಆ ಸಮಸ್ಯೆ ಬಗೆಹರಿಯಲ್ಲ. ಅದನ್ನ ಎದುರಿಸ್ಬೇಕು. ನೀನು ಆ ಹುಡುಗಿನ ಯಾಕೆ ಇಷ್ಟಪಡ್ತಿದ್ದೆ?... ಅವಳಲ್ಲಿ ಏನು ಮೆಚ್ಚಿದೆ?... ಅದೆಲ್ಲಾ ನೀನೇ ಆಗ್ಬೇಕಮ. ಚನ್ನಾಗಿ ಓದು, ಇಂಗ್ಲಿಷ್ ಕಲಿ. ಜ್ಞಾನ ಹೆಚ್ಚಿಸ್ಕ. ಒಳ್ಳೆ ಆಸಕ್ತಿ ಹವ್ಯಾಸ ಬೆಳೆಸ್ಕ. ಮೊದ್ಲು ಅವಳ ಹಿಂದಿಂದೆ ಅಡ್ಡಾಡದನ್ನ ಬಿಡು. ನೋಡಕೆ ಚನ್ನಾಗಿರೋರು, ನಮಗಿಷ್ಟ ಆಗೋರೆಲ್ಲಾ ಸ್ನೇಹಿತರಾಗಲ್ಲ ಕಣೇ ಪಾಪಿ...’ ಅಂದು, ಪುಸ್ತಕಗಳ್ನೆಲ್ಲಾ ನಂಗ್ಕೊಟ್ಟು ‘ಬುಕ್ಸ್ ಆರ್ ಬೆಸ್ಟ್ ಫ್ರೆಂಡ್ಸ್. ಯಾವತ್ತು ನಿನ್ನ ಕೈ ಬಿಡಲ್ಲ. ಇನ್ನು ಆ ಹುಡುಗಿ ಸುದ್ದಿಗೆ ಹೋಗ್ಬೇಡ. ನೀನೆಂಗೆ ಅವಳ ಸ್ನೇಹ ಬಯಸ್ತಿಯೋ ಹಂಗೆ ಅವ್ಳೂ ನಿನ್ನ ಸ್ನೇಹ ಬಯಸಿ ಬರ್ಬೇಕು. ನೀನು ಹಂಗಾಗ್ಬೇಕು...’ ಅಂತು. ಅಲೆ ಇವ್ನ ಹೌದಲ್ವಾ ಅನ್ನಿಸ್ತು. ಈ ನಿಟ್ಟಿನಲ್ಲಿ ನಾನೆಂದು ಯೋಚಿಸಿಯೇ ಇರ್ಲಿಲ್ಲ. ಹಂಗೇ ಮಾಡ್ದೆ ನಾನು. ಮೊದ್ಲು ಅವ್ಳ ಹಿಂದೆ ಮುಂದೆ ಸುತ್ತೋದನ್ನ ಬಿಟ್ಟೆ. ಮಾತು ಪೂರ ನಿಲ್ಲಿಸಿ ಓದಿನ್ಕಡೆ ಗಮನಕೊಟ್ಟೆ. ಹಾಡು, ನಾಟಕ ಎಲ್ಲದರಲ್ಲೂ ಭಾಗವಹಿಸಕೆ ಶುರು ಮಾಡ್ದೆ. ಹೈಸ್ಕೂಲಲ್ಲು ನಾವಿಬ್ರು ಬೇರೆ ಸೆಕ್ಷನ್. ಜತೇಲಿ ನನ್ನ ಕೀಟಲೆ, ತಮಾಷೆ ಸ್ವಲ್ಪ ಗದ್ದಲವು ಸೇರಿ ನಂದೆ ಒಂದು ದೊಡ್ಡ ಗುಂಪು. ಅವಳು ಒಂಟಿಯಾದ್ಲು. ಮೌನಿಯಾದ್ಲು. ಅವಳ ಕ್ಲಾಸೆ ಹಂಗಿತ್ತು. ಅದಕ್ಕೂ ಅವಳೇ ಲೀಡರ್. ಆದರೆ ಕಾಲೇಜಿನಲ್ಲಿ ನಾವಿಬ್ರೂ ಮತ್ತೆ ಒಂದೇ ಸೆಕ್ಷನ್. ಅಲ್ಲೂ ಹಂಗೆ ಮುಂದುವರಿದೆ ನಾನು. ಕಿಂಚಿತ್ತೂ ಬದಲಾಗ್ಲಿಲ್ಲ. ಅಪ್ಪಾಜಿ ಹೇಳಿದ್ದ ಆ ದಿನ ಬಂದೆ ಬಿಡ್ತು. ಆದ್ರೆ ನಂಗಾಗ ಖಂಡಿತ ಅದರ ನೆನಪಾಗ್ಲಿ, ಅಪೇಕ್ಷೆಯಾಗ್ಲಿ ನಿಜವಾಗ್ಲೂ ಇರ್ಲಿಲ್ಲ. ಅವಳು ಆ ದಿನ ಬಂದವ್ಳೇ ನನ್ನ ಕೈ ಹಿಡ್ದು ‘ನಾವಿಬ್ರೂ ಫ್ರೆಂಡ್ಸ್ ಆಗಿರೋಣ ಜಾನ್ವಿ ಪ್ಲೀಸ್...’ ಅಂತ ಕೇಳಿದ್ಲು. ಇವತ್ತು ಅವಳಿಲ್ಲ. ಆದರೆ ಇದ್ದಷ್ಟು ದಿನ ಸ್ನೇಹಿತರಾಗಿದ್ವಿ. ಅಲ್ಲಿಂದ ನಂದು ಹೊಸ ದಾರಿ. ಮರುಹುಟ್ಟು. ಈ ಘಟನೆ, ಪ್ರಶ್ನಿಸೋದನ್ನ ಪ್ರತಿಭಟಿಸೋದನ್ನ ಕಲಿಸ್ತು. ನನ್ನದೇ ಆದ ಐಡೆಂಟಿಟಿಯನ್ನ ಸೃಷ್ಟಿಸಿಕೊಳ್ಳುವ ಹಂಬಲ ಮತ್ತು ಆ ಪ್ರಯತ್ನಕ್ಕೆ ಚಾಲನೆ ನೀಡ್ತು. ನನ್ನ ಇಡೀ ಜೀವಮಾನಕ್ಕೆ ಸಾಕಾಗುವಷ್ಟು ದ್ವೇಷ, ಪರಿತಾಪ, ಸಿಟ್ಟು, ಅಸಹನೆ, ಕೀಳರಿಮೆಯನ್ನು ನನ್ನಲ್ಲಿ ಬಿತ್ತಿ ಬೆಳೆಸುವಷ್ಟು ಶಕ್ತವಾಗಿದ್ದ ಆ ಘಟನೆ ನನ್ನ ಜೀವನದ ಸ್ಟ್ರಾಂಗ್ ಸೂಟ್ ಆಗಿ ಉಳ್ಕಂಡು ಬಿಡೋದು ಅಪ್ಪಾಜಿ ಇಲ್ಲದೆ ಹೋಗಿದ್ದರೆ. ಇದು ಒಂದು ಉದಾಹರಣೆ ಅಷ್ಟೇ, ಇಂತಹ ಅನೇಕ ಘಟನೆಗಳು ಅವುಗಳಿಂದ ನನ್ನನ್ನು ಪಾರು ಮಾಡಿದ ಅಪ್ಪಾಜಿ ಇವತ್ತಿಗೂ ಹಚ್ಚಹಸುರು. ಅಪ್ಪಾಜಿ ನಮ್ಮಿಂದ ದೈಹಿಕವಾಗಿ ದೂರವಾಗಿ ಇಪ್ಪತ್ತೊಂಬತ್ತು ವರುಷಗಳು. ಎಷ್ಟೆಲ್ಲಾ ಏಳುಬೀಳುಗಳನ್ನು, ಏನೆಲ್ಲಾ ತಿರುವುಗಳನ್ನು ಕಂಡಿದೆ ಬದುಕು. ಪ್ರತಿಕ್ಷಣದಲ್ಲೂ, ಈ ಕ್ಷಣದಲ್ಲೂ ಕೈ ಹಿಡಿದು ಮುನ್ನಡೆಸುತ್ತಿರುವುದು ಆ ಮಾತುಗಳು. ಅವು ಎಂದಿಗೂ ಪ್ರಸ್ತುತ.

◆ **ನಮ್ಮ ಸಂದರ್ಭದಲ್ಲಿ ಮಹಿಳಾ ಸಾಹಿತ್ಯ ಕತೆ ಕಾದಂಬರಿಗಿಂತ ಕವಿತೆಗಳ ಮೂಲಕವೇ ಹೆಚ್ಚು ಅಭಿವ್ಯಕ್ತಿ ಪಡೆಯುತ್ತಿದೆ. ಪ್ರಮುಖ ಕತೆಗಾರ್ತಿಯಾಗಿ ನಿಮಗೆ ಈ ಪ್ರಕಾರಗಳ ಬಗ್ಗೆ, ಪಲ್ಲಟದ ಬಗ್ಗೆ ಏನೆನ್ನಿಸುತ್ತದೆ?**

ಮಹಿಳಾ ಸಾಹಿತ್ಯ ಮಾತ್ರವಲ್ಲ ಎಲ್ಲರ ಒಲವೂ ಕಾವ್ಯದತ್ತ ಹೆಚ್ಚು ವಾಲುತ್ತಿರುವಂತೆ ತೋರ್ತಾ ಇದೆ. ಇದು ಇಂಟರ್ನೆಟ್ ಮಹಿಮೆಯೂ ಹೌದು. ಸಾಮಾಜಿಕ ಜಾಲತಾಣಗಳು ಹುಟ್ಟಿಕೊಂಡ